ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಕೆಲವು ತಾಲ್ಲೂಕುಗಳಲ್ಲಿ ಸರ್ಕಾರದವರು ವರ್ಕ್ ಷಾಪ್‌ಗಳನ್ನು ನಡೆಸುತ್ತಿದ್ದಾರೆ. ಇದಕ್ಕೆ ಪೂರಕವಾಗುವಂಥ ತರಬೇತಿಯನ್ನು ಈ ಕೇಂದ್ರಗಳಲ್ಲಿ ಕೊಡುವುದಕ್ಕೆ ಆದ್ಯತೆ ಕೊಡುವ ಯೋಚನೆ ಮಾಡುತ್ತೀರಾ?

ಶ್ರೀ ಎಂ. ರಘುಪತಿ.—ಖಂಡಿತವಾಗಿಯಾ ಇದು ಸೂಕ್ತವಾದ ಸಲಹೆ.

ವಿಷಯ :—ಬ್ಯಾಡಗಿಯಲ್ಲಿ ಮುನ್ಸೀಫ್ ಮತ್ತು ಜೆ.ಎಂ.ಎಫ್.ಸಿ. ಕೋರ್ಟ್ ಸ್ಥಾಪನೆಯ ಬಗ್ಗೆ.

ಪ್ರ. 152(69) ಶ್ರೀ ಹೆಗ್ಗಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ತಾಲ್ಲೂಕ್ ಸ್ಥಳವಾದ ಬ್ಯಾಡಗಿಯಲ್ಲಿ ಮುನ್ಸೀಫರ ನ್ಯಾಯಾಲಯವನ್ನು ಸ್ಥಾಪಿಸುವ ವಿಚಾರ ಸರ್ಕಾರದಲ್ಲಿದೆಯೇ ;

ಆ. ಹಾಗಿದ್ದಲ್ಲಿ ಈ ನ್ಯಾಯಾಲಯವನ್ನು ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಮಂತ್ರಿಗಳು :—

ಅ. ಹೌದು ;

ಆ. ರಾಜ್ಯದ ಉಚ್ಚ ನ್ಯಾಯಾಲಯದ ಶಿಫಾರಸ್ಸು ಬಂದ ನಂತರ ಬ್ಯಾಡಗಿಯಲ್ಲಿ ಮುನ್ಸೀಫ್ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಡಾ. ಹೆಗ್ಗಪ್ಪ ಲಮಾಣಿ.—ಮಾನ್ಯ ಮಂತ್ರಿಗಳಿಗೆ ಬ್ಯಾಡಗಿಯಲ್ಲಿ ಮುನ್ಸೀಫ್ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ ಬಂದಿರುವುದು ಗೊತ್ತಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಶಿಫಾರಸ್ ಬಂದರೆ ನಾನು 24 ಗಂಟೆಯೊಳಗೆ ನನ್ನ ಒಪ್ಪಿಗೆಯನ್ನು ಕೊಡುತ್ತೇನೆ. ಇದರ ಜೊತೆಗೆ ಹಣಕಾಸಿನ ಇಲಾಖೆಯವರು ಇದಕ್ಕೆ ಒಪ್ಪಿಕೊಳ್ಳಬೇಕು.

ಡಾ. ಹೆಗ್ಗಪ್ಪ ಲಮಾಣಿ.—ಉಚ್ಚ ನ್ಯಾಯಾಲಯದ ಶಿಫಾರಸ್‌ಗಳನ್ನು ನಾನೇ ಸ್ವತಃ ತಮಗೆ ತಂದು ಕೊಟ್ಟಿದ್ದೇನೆ. ತಾವು ಅದನ್ನು ಹಣಕಾಸಿನ ಇಲಾಖೆಗೆ ಕಳುಹಿಸಿದ್ದೀರೋ ಗೊತ್ತಿಲ್ಲ. ಹಣ ಕಾಸಿನ ಇಲಾಖೆಯ ಒಪ್ಪಿಗೆಯನ್ನು ಜಾಗ್ರತೆಯಾಗಿ ಪಡೆದುಕೊಂಡು ಬ್ಯಾಡಗಿಯಲ್ಲಿ ನ್ಯಾಯಾಲಯ ವನ್ನು ಆದಷ್ಟು ಬೇಗ ಸ್ಥಾಪನೆ ನೂಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಉಚ್ಚನ್ಯಾಯಾಲಯದ ರಿಜಿಸ್ಟ್ರಾರ್ ಅವರನ್ನು ಇದರ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳತಕ್ಕ ಕೋರಿಕೆಯ ವಿಷಯದಲ್ಲಿ ಅವರ ಒಪ್ಪಿಗೆ ಕೇಳಲಾಗಿದೆ. ಅವರ ಉತ್ತರವನ್ನು ಶೀಘ್ರವಾಗಿ ಕಾಯಲಾಗುತ್ತಿದೆ. ದಿನಾಂಕ 16-6-1983 ರಂದು ಇನ್ನೊಂದು ಜ್ಞಾಪಕ ಪತ್ರವನ್ನೂ ಕೂಡ ಅವರಿಗೆ ಬರೆಯಲಾಗಿದೆ.

ವಿಷಯ :—ದಾವಣಗೆರೆ ನಗರಕ್ಕೆ ಸಾರಿಗೆ ಸೌಲಭ್ಯ.

ಪ್ರ. 153 (60) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ದಾವಣಗೆರೆ ನಗರದಲ್ಲಿ ಅನೇಕ ಕೈಗಾರಿಕೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ರೈತರು, ವಿದ್ಯಾರ್ಥಿಗಳೂ, ಕಾರ್ಮಿಕರು ಶಾಲೆ ಕಾರ್ಖಾನೆಗಳಿಗೆ ಹಳ್ಳಿಗಾಡಿನಿಂದ ಬಹು ಸಂಖ್ಯೆಯಲ್ಲಿ ದಿನವೂ ದಾವಣಗೆರೆಗೆ ಬಂದು ಹೋಗುವುದು ಸರಕಾರಕ್ಕೆ ತಿಳಿದಿದೆಯೇ ;

ಇ. ಹೀಗೆ ಬಂದು ಹೋಗುವ ಜನರಿಗೆ ಸಾರಿಗೆ ವಾಹನ ಸೌಕರ್ಯವಿಲ್ಲದೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

ಈ. ದಾವಣಗೆರೆಯಿಂದ 15 ಮೈಲು ಫಾಸಲೆಯಿಂದ ದಾವಣಗೆರೆಗೆ ಈ ಜನ ಬಂದು ಹೋಗಲು ಅಗತ್ಯವಾದ ಸಾರಿಗೆ ವಾಹನ ಸೌಕರ್ಯವನ್ನು ಸರ್ಕಾರ ಏರ್ಪಡಿಸಲು ವಿಚಾರವಿದೆಯೇ ? ಎಷ್ಟು ದಿನಗಳಲ್ಲಿ ಈ ಸೌಕರ್ಯವನ್ನು ಈ ಜನತೆಗೆ ಪೂರೈಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು) :—

ಅ. ಬಂದಿದೆ

ಆ. ತಿಳಿದಿದೆ

ಇ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಿಕಸ್ವಾಮತ್ವಕ್ಕೆ ಒಳಪಟ್ಟಿರುವ ಪ್ರದೇಶದಲ್ಲಿ 189 ಟ್ರಿಪ್‌ಗಳನ್ನು ಓಡಿಸುತ್ತಿದ್ದು. ಹರಿಹರ-ದಾವಣಗೆರೆ ನಡುವೆ 70 ಟ್ರಿಪ್‌ಗಳನ್ನು ಓಡಿಸಲಾಗುತ್ತಿದೆ. ಇತರ ಪ್ರದೇಶಗಳಲ್ಲಿ ಖಾಸಗಿ ವಾಹನ ಮಾಲೀಕರು ಸಾರಿಗೆ ವ್ಯವಸ್ಥೆಯನ್ನು ಮಾಡಿರುತ್ತಾರೆ. ಒಟ್ಟು 144 ಖಾಸಗಿ ವಾಹನಗಳು ಸಂಚರಿಸುತ್ತಿವೆ. ಆದಾಗ್ಯೂ ಜನರಿಗೆ ಸಂಪೂರ್ಣ ವಾಹನ ಸೌಕರ್ಯ ಇದೆಯೆಂದು ಹೇಳಲಾಗದು ;